ಕರ್ನಾಟಕ ಸರ್ಕಾರ

# ಅಪರ ಸಿವಿಲ್ ಜಡ್ಜ್ ಮತ್ತು ಜೆಎಮ್‌ಎಫ್‌ಸಿ ನ್ಯಾಯಾಲಯ, ದೇವನಹಳ್ಳಿ

ಸಿ.ಸಿ.ನಂ.2136-2016

| | | |
|---|---|---|
| ಹೆಸರು | ಃ | ಬಿ.ಎಸ್.ಪ್ರಕಾಶ್‌ಬಾಬು |
| ತಂದೆ | ಃ | ಎಮ್.ಬಿ.ಸೂರ್ಯನಾರಾಯಣ |
| ವಯಸ್ಸು | ಃ | 61 |
| ಉದ್ಯೋಗ | ಃ | ನಿವೃತ್ತ ಪಿಎಸ್‌ಐ |
| ವಾಸ | ಃ | ಯಲಹಂಕ |

**PW -2 CW-1,**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ 23-12-2019

ಮುಖ್ಯ ವಿಚಾರಣೆ ಃ ಎಪಿಪಿರವರಿಂದ ಃ

ನಾನು 2015 ರಿಂದ 2018 ರವರರೆಗೆ ಎಎಸ್‌ಐಯಾಗಿ ಹಾಗೂ 2018 ರಿದ 2019 ರವರೆಗೆ ಪಿಎಸ್‌ಐಯಾಗಿ ಚಿಕ್ಕಜಾಲ ಸಂಚಾರ ಪೋಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ.19-02-2016 ರಂದು ಬೆಳಿಗ್ಗೆ 8-00 ರಿಂದ ರಾತ್ರಿ 8-00 ಗಂಟೆಗೆ ಏರ್‌ಪೋರ್ಟ್‌ನ ಎಮ್‌ವಿಐಟಿ ಜಂಕ್ಷನ್‌ನಲ್ಲಿ ಲಾರಿ ಡೈವರ್ಶನ್ ಕರ್ತವ್ಯಕ್ಕೆ ನನ್ನನ್ನು ಹಾಗೂ ಚಾಸಾ 6 ರವರನ್ನು ನೇಮಿಸಿರುತ್ತಾರೆ. ಬೆಳಿಗ್ಗೆ 9-20 ರಿಂದ 9-30 ಗಂಟೆಗೆ ನಾನು ಮತ್ತು ಚಾಸಾ 6 ರವರು ಕರ್ತವ್ಯ ನಿರ್ವಹಿಸುತ್ತಿದ್ದಾಗ ಏರ್‌ಪೋರ್ಟ್‌ನಿಂದ ಸಿಟಿ ಕಡೆಗೆ ಜೋರಾಗಿ ಶಬ್ದ ಕೇಳಿ ಬಂದ ಕಾರಣ ಶಬ್ದ ಬಂದ ಜಾಗಕ್ಕೆ ನಾನು ಮತ್ತು ಚಾಸಾ 6 ರವರು ಹೋಗಿ ನೋಡಿದಾಗ ಒಬ್ಬ ಹೆಣ್ಣು ಮಗಳಿಗೆ ತಲೆಗೆ ರಕ್ತಸ್ರಾವವಾಗಿ ರಸ್ತೆಯಲ್ಲಿ ಬಿದ್ದಿರುವುದು ಕಂಡು ಬಂದಿರುತ್ತದೆ. ಆಗ ನಾನು 108 ಆಂಬ್ಯುಲೆನ್ಸ್‌ಗೆ ಕರೆ ಮಾಡಿ ಸ್ಥಳದಲ್ಲಿದ್ದ ಮಹಿಳೆಯನ್ನು ಚಾಸಾ 6 ರವರ ಜೊತೆ ಚಿಕಿತ್ಸೆಗಾಗಿ ಕೊಲಂಬಿಯಾ ಆಸ್ಪತ್ರೆಗೆ ಕಳುಹಿಸಿರುತ್ತೇನೆ. ಸದರಿ ಸ್ಥಳದಲ್ಲಿ ಕೆಎ-03-ಎಮ್‌ಜೆ-9903 ಮಾರುತಿ ಸ್ವಿಫ್ಟ್ ಕಾರು ಸ್ಥಳದಲ್ಲಿರುತ್ತದೆ. ಸದರಿ ವಾಹನವನ್ನು ಸುಗಮ ಸಂಚಾರಿ ಸುವ್ಯವಸ್ಥೆಗಾಗಿ ಚಾಲಕರ ಸಮೇತ ಪಕ್ಕಕ್ಕೆ ನಿಲ್ಲಿಸಿರುತ್ತೇವೆ. ಸಾರ್ವಜನಿಕರನ್ನು ಘಟನೆ ಹೇಗೆ ಆಯಿತು ಎಂದು

ವಿಚಾರಿಸಲಾಗಿ ಮಹಿಳೆಯು ಪೂರ್ವದಿಂದ ಪಶ್ಚಿಮಕ್ಕೆ ರಸ್ತೆ ದಾಟುವಾಗ ಏರ್‌ಪೋರ್ಟ್ ರಸ್ತೆಯಿಂದ ಸಿಟಿ ಕಡೆಗೆ ಅಂದರೆ ದಕ್ಷಿಣದಿಂದ ಉತ್ತರದ ಕಡೆಗೆ ಆರೋಪಿ ವಾಹನವನ್ನು ಅತಿವೇಗವಾಗಿ ಚಾಲನೆ ಮಾಡಿಕೊಂಡು ಮಹಿಳೆಗೆ ಅಪಘಾತಪಡಿಸಿರುವುದಾಗಿ ತಿಳಿದು ಬಂದಿರುತ್ತದೆ.

3. ನಂತರ ಚಾಸಾ 6 ರವರು ದೂರವಾಣಿ ಕರೆ ಮಾಡಿ ಗಾಯಾಳು ಮಹಿಳೆಯು ಮಾರ್ಗಮದ್ಯದಲ್ಲಿ ಮೃತಪಟ್ಟಿರುವುದಾಗಿ ಮಾಹಿತಿ ನೀಡಿರುತ್ತಾರೆ. ಅವರ ಸಾಮಾನುಗಳನ್ನು ಪರಿಶೀಲಿಸಲಾಗಿ ಅವರ ಹೆಸರು ನಿಶಾ ಶರ್ಮಾ ಕೋಂ ಮುರಳಿಧರ ಮಿಶ್ರಾ 52 ವರ್ಷ ಎಂದು ತಿಳಿದು ಬಂದಿರುತ್ತದೆ. ಆರೋಪಿತರು ನಾನು ವಿಚಾರಣೆ ಮುಗಿಸಿ ಬರುವಷ್ಟರಲ್ಲಿ ಸ್ಥಳದಿಂದ ಪರಾರಿಯಾಗಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿಯೇ ಸದರಿ ಸ್ಥಳದಿಂದ ಪರಾರಿಯಾದ ವ್ಯಕ್ತಿಯಾಗಿರುತ್ತಾರೆ. ನಂತರ ಠಾಣೆಗೆ ಹೋಗಿ ನಾನು ದೂರು ನೀಡಿರುತ್ತೇನೆ. ಸದರಿ ದೂರನ್ನು ಈಗ ನೋಡುತ್ತಿದ್ದು ನಿಪಿ 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 3 (ಎ) ಎಂದು ಗುರುತಿಸಲಾಯಿತು. ಸದರಿ ದೂರನ್ನು ನನ್ನ ಹಸ್ತಾಕ್ಷರದಿಂದ ನಾನೇ ಬರೆದಿರುತ್ತೇನೆ. ಮರುದಿನ ಚಾಸಾ 21 ರವರು ಠಾಣೆಗೆ ಬರಮಾಡಿಕೊಂಡು ಠಾಣೆಯಲ್ಲಿದ್ದ ವ್ಯಕ್ತಿಯನ್ನು ತೋರಿಸಿರುತ್ತಾರೆ. ಸದರಿ ವ್ಯಕ್ತಿಯೇ ಹಿಂದಿನ ದಿನ ಅಪಘಾತಪಡಿಸಿದ ವ್ಯಕ್ತಿ ಎಂದು ನಾನು ಗುರುತಿಸಿರುತ್ತೇನೆ. ಆರೋಪಿಯನ್ನು ಗುರುತಿನ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ಭಾವಚಿತ್ರಗಳನ್ನು ತೋರಿಸಲಾಯಿತು. ಭಾವಚಿತ್ರದಲ್ಲಿದ್ದ ವಾಹನವು ಅಪಘಾತಪಡಿಸಿದ ವಾಹನವಾಗಿರುತ್ತದೆ ಎಂದು ಗುರುತಿಸಿದ ಮೇರೆಗೆ ನಿಪಿ 4 ರಿಂದ 7 ಎಂದು ಗುರುತಿಸಲಾಯಿತು.

(ಆರೋಪಿ ಹಾಜರಾಗಿದ್ದು, ಆರೋಪಿ ಪರ ವಕೀಲರು ಗೈರು ಹಾಜರಾಗಿದ್ದು, ಆರೋಪಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಸೂಕ್ತ ಕಾರಣಗಳನ್ನು ನೀಡದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು)

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಎ. ಒಪ್ಪಲಾಗಿದೆ.

ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ.